ಕಾಂತಣ್ಣ ಆಗುವಷ್ಟರಲ್ಲಿ ಮೂವತ್ತೇಳು ವರ್ಷಕ್ಕೆ ಆಧಾರ್ ಕಾರ್ಡಿಗೆ ಫೋಟೊ ಹೊಡೆಸಿಕೊಂಡ. ಒಂದು ಹೆಣ್ಣು ಹಡೆದುಕೊಡುವಷ್ಟರಲ್ಲಿ ರಾಜಮ್ಮ, ಗುಳಿಕೆನ್ನೆ ಗುಳಿಕಣ್ಣು ಕೃಶದೇಹದಲ್ಲಿ ಅಸಹನೀಯವಾದಳು. ನ್ಯೂಸ್‌ಪೇಪರ್‌ನ್ನು ಪಕ್ಕದ ಕಟಿಂಗ್ ಶಾಪಿನಿಂದ ತಂದು ಗಟ್ಟಿಯಾಗಿ ಓದುವ ಅಭ್ಯಾಸದ ರವಿಕಾಂತನಿಗೆ ಡೆಂಗಿ ಜ್ವರಕ್ಕೆ ಮೊದಲ ಬಲಿ ಎಂಬ ಹೆಡ್‌ಲೈನಿನ ಸುದ್ದಿಯ ಜೊತೆ ತನ್ನ ಎಳೆಕಂದನ ಹೆಸರು ಇರುತ್ತದೆಂಬ ಕಲ್ಪನೆಯೂ ಇಲ್ಲದಷ್ಟು ವೇಗವಾಗಿ ವಿಧಿ ಬರಸಿಡಿಲು ಬಡಿದಿತ್ತು. ಮಗಳ ಹಿಂದೆಯೇ ಮೌನವಾಗಿ ಹೆಂಡತಿ ಹೊರಟುಬಿಟ್ಟಳು.

ಶಿಸ್ತಿನ ಬದುಕು ಹಾಳಾಯಿತು, ದುಡಿಮೆ ಕೈಕೊಟ್ಟಿತು, ಚಟಗಳು ಮೈಯೇರಿ ಕುಣಿದವು. ರವಿಕಾಂತ ಬದುಕು ಬದಲಾಗುತ್ತಾ ಹೊರಳುತ್ತಾ ವಿಚಿತ್ರ ಪಾತಳಿಯಲ್ಲಿ ಬೇಯುತೊಡಗಿದ್ದನ್ನು ನೋಡಿದ, ನೋಡಿದ, ನೋಡುತ್ತಲೇ ಉಳಿದ.

ಎಲೆಕ್ಟ್ರಿಕಲ್ ರಿಪೇರಿ ಮಾಡುತ್ತಾ ಎಲೆಕ್ಟ್ರಾನಿಕ್ಸ್‌ಗೆ ತಿರುಗಿದ. ಬಿನಾಟೋನಾ ಟೀವಿ, ಮರ್ಫಿ ರೇಡಿಯೊ ಮೂಲೆ ಹಿಡಿದು ನೋಕಿಯಾ ಫೋನು ರಿಂಗಣಿಸಿತು. ಜನ ಬರತೊಡಗಿದರು. ಮಾತು ಕಲೆಯತೊಡಗಿದವು. ಕಾಲ ಚಕ್ರ ನಿರಾಯಾಸವಾಗಿ ಉರುಳಿತು. ದುರ್ಗ 'ಇತಿಹಾಸಕ್ಕೆ ಹತ್ತಿರವಾಗೇ ಇರುವೆ' ಎನ್ನುವಂತೆ ಹಾಗೇ ಇದ್ದರೆ, ದಾವಣಗೆರೆಯ ಬಿಕೋ ಎನ್ನುವ ಊರಾಚೆಯ ಬಯಲುಗಳೆಲ್ಲ ಸೈಟು ಮನೆ ಟೌನ್‌ಶಿಪ್ಪುಗಳಾಗಿ ಒಮ್ಮೇಲೆ ಬರಿದಾದ ಕಾಟನ್ ಮಿಲ್ಲುಗಳ ದುರಂತದ ನೆರಳನ್ನು ಮರೆಸತೊಡಗಿದವು. ಕಾಂತಣ್ಣನಿಗೆ ಸಂಬಂಧಿಸಿದವರು, ಅವನ ನೆನಪಿಗೆ ಬುದ್ಧಿಗೆ ದೇಹಕ್ಕೆ ಸಂಬಂಧಿಸಿದ್ದು ಮಾಯವಾಗತೊಡಗಿ... ಹೊಸ ಬದುಕು ಬದುಕತೊಡಗಿದ. ಮರುಮದುವೆಯ ಯೋಚನೆಯೂ ಬಾರದೆ, ಸಣ್ಣಮಕ್ಕಳನ್ನು ತಪ್ಪಿಯೂ ದಿಟ್ಟಿಸದೆ... ಸುಮ್ಮನೆ ಸುಮ್ಮನೆ ಬದುಕತೊಡಗಿದ. 'ಈಸಬೇಕು ಇದ್ದು ಜಯಿಸಬೇಕು' ಎಂಬುದೊಂದು ಬದುಕಿನ ಧ್ಯೇಯ ಮಂತ್ರವೆಂದುಕೊಂಡವನಿಗೆ ಅದೂ ಅರ್ಥಹೀನವಾಗುವ ಹೊತ್ತಿಗೆ...

ಆ ಹುಡುಗಿ ಬೆಳಗ್ಗೆಯ ಬೆಳಕನ್ನು ಒಮ್ಮೇಲೆ ಮುಚ್ಚುವಂತೆ ಬಾಗಿಲಿಗೆ ಅಡ್ಡ ನಿಂತು ಒಳಗೆ ಬಂದಿದ್ದಳು. ಬಂದ ಹುಡುಗಿಯ ಹೆಸರು, ಪ್ರಾಯ ನಾಜೀಮಾಳನ್ನು ನೆನಪಿಸಿತು. ಸೌಂದರ್ಯ ಅಂದರೆ, ಸುಖ ಅಂದರೆ, ಪ್ರಾಯ ಅಂದರೆ ಅವಳೇ ಆಗಿಹೋಗಿದ್ದ ದಿನಗಳು ನೆನಪಾದವು. ಈ ಇಪ್ಪತ್ತು ವರ್ಷಗಳಲ್ಲಿ ಬದುಕು ಏನೇನೋ ಆಗಿಹೋಗಿದ್ದು, ಎಲ್ಲ ಒಣಗಿ ಮುರುಟಿ ಹೋಗಿದ್ದು ಅದಕ್ಕೆ ತಾನು ತನ್ನನ್ನೇ ನಿತ್ಯ ಬಲಿಕೊಟ್ಟುಕೊಳ್ಳುತ್ತಿದ್ದುದು ಮರೆಸುವಂತೆ ನಾಜೀಮಾಳ ಮೈಗಂಧ ಅವನ ನರನಾಡಿಗಳಲ್ಲಿ ಹರಿಯಿತು. ಅವಳನ್ನು ನೋಡಿಯೇ ಬಿಡಬೇಕೆಂದು ನಿರ್ಧರಿಸಿ ಕೈಗೆತ್ತಿಕೊಂಡ ಐಫೋನನ್ನು ಕೆಳಗಿಟ್ಟ. ಮಧುವನ್ನು ತುಪ್ಪೆಂದು ಉಗುಳಿ, ಜೇಬಿನಲ್ಲಿನ ದುಡ್ಡು ಎಣಿಸಿಕೊಂಡು ಶಟರ್ ಎಳೆದು ಹೊರಬಿದ್ದ.

## 3

ನಿತ್ಯ ಸಾಜನ್ ಸಿನಿಮಾದ ಹಾಡು ಹಾಕುತ್ತಿದ್ದಳು ಅವಳು. ಅವಳ ಅಕ್ಕ ಅಜುಂ ಸರಳ ಸುಂದರಿ. ಉದ್ದ ಕೂದಲು, ಕಿವಿಗೆ ದೊಡ್ಡ ರಿಂಗುಗಳು ರಸ್ತೆಯುದ್ದಕ್ಕೂ ತಲೆತಗ್ಗಿಸಿ ನಡೆಯುವ ಹುಡುಗಿ. ನಾಜಿಮಾ ಅವಳ ನಾಲ್ಕರಷ್ಟು ಲವಲವಿಕೆಯನ್ನು ಇಟ್ಟುಕೊಂಡು ಯೌವನದ ಬಿಲ್ಲು ಮೀಟಿದಂತೆ ಮೀಟಿ ನಿಲ್ಲುವ ಬಾಲೆ. ರವಿಕಾಂತನಿಗೂ ಅವಳಿಗೂ ಆಕರ್ಷಣೆಗಿಂತ ಪರಸ್ಪರ ಸಹಾಯ ಮಾಡುತ್ತ ಹತ್ತಿರವಾಗುವ ಅವಕಾಶ ಒದಗಿ ಬಂತು. ಬೀದಿಯೆಲ್ಲಾ ಸಿಳ್ಳೆ ಹೊಡೆಯುತ್ತಾ ಈ 'ಬುಲ್‌ಬುಲ್'ನ ಕೆರಳಿಸುತ್ತಿದ್ದರೆ ಯಾರ ಕೈಗೂ ಸಿಗದೆ ಜಿಂಕೆಮರಿಯಂತೆ ಜಿಗಿದು ಮಾಯವಾಗಿ ಬಿಡುತ್ತಿದ್ದವಳು ಇವನ ಸಾಮಿಪ್ಯಕ್ಕೆ ಸಿಕ್ಕುಬಿಟ್ಟಿದ್ದಳು. ಏಕಾಂತದಲ್ಲಿ ಕರೆಸಿಕೊಳ್ಳುತ್ತಿದ್ದಳು. ಹೊಸ ಕ್ಯಾಸೆಟ್ ಕೊಂಡುತರಲು ಹಣಕೊಡುತ್ತಿದ್ದಳು, ಬಲ್ಬು ಬದಲಿಸಲು, ಸಿಕ್ಕಿಕೊಂಡ ಬಾಗಿಲು